Regd No B C 155 12-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಗರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರಸಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ರಾಷ್ಟ್ರೀಕರಣ ಕುರಿತು ಹೊಸ ಆರ್ಡಿನೆನ್ಸ್

ನಕ್ಸಲೈಟರ ಹಾವಳಿ

ಕನ್ನಾನೂರು— 30 ಮಂದಿ ನೆಕ್ಸಲೈಟರು ತ್ರಿಸ್ಸಾರೆಲಿಯಲ್ಲಿ ಇಬ್ಬರು ಮನೆ ಮಾಲೀಕರನ್ನು ಗುಂಡಿಕ್ಕಿ ಸಾಯಿಸಿ, ಐದಾರು ಮನೆಗಳಲ್ಲಿ ಡಕಾಯಿತಿ ನಡೆಸಿ ಚಿನ್ನಾಭರಣ, ಹಣ, ತಾಂಬ್ರ ಉಕ್ಕು ಪಾತ್ರೆಗಳು, ಒಂದು ರೇಡಿಯೋ ಅಪಹರಿಸಿ ಪರಾರಿಯಾದರು.

★

ಚಲಚಿತ್ರಗಳಲ್ಲಿ

ಚುಂಬನ

ನವದೆಹಲಿ— ಭಾರತ ಚಲನಚಿತ್ರಗಳಲ್ಲಿ ಚುಂಬನಕ್ಕೆ ಅವಕಾಶ ಕೊಡಬಹುದು. ಎಂಬ ವಿಷಯದಲ್ಲಿ, ಪಾರ್ಲಿಮೆಂಟು ಸದಸ್ಯರೊಡನೆ ಪರ್ಯಾಲೋಚಿಸಿ ತೀರ್ಮಾನಿಸಲಾಗುವುದೆಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿಯವರು ಹೇಳಿದರು.

○

ಮೌನ

ನವದೆಹಲಿ— ಬಾದಷಾಖಾನರು ನಾಲ್ಕು ತಿಂಗಳ ಕಾಲ ಭೇಟಿಯಿತ್ತ ವಿಷಯದಲ್ಲಿ ಪಾಕ್ ರೇಡಿಯೋ ಅನುಸರಿಸಿದ ಮೌನವನ್ನು ಮುಂದುವರಿಸಿತೆ.

ಇರ್ವಾ ಕೊಳ್ಳಲಿದೆ

ನವದೆಹಲಿ — ಇರಾನು ಭಾರತದ ರೂ 4.25 ಕೋಟಿ ಬೆಲೆಯ ರೈಲ್ವೇ ವ್ಯಾಗ್ಗನ್ ಗಳನ್ನೂ ರೂ 75 ಕಕ್ಷ ಬೆಲೆಯ 984 ಕಪ್ಲೆಟ್ಟುಗಳನ್ನೂ ಕೊಳ್ಳುವ ನಿರೀಕ್ಷೆ ಇದೆ.

★

ಭೌಗೋಳಿಕ ಹೆಸರುಗಳು

ನವದೆಹಲಿ— ಈಗಿನ ಪಶ್ಚಿಮ ಬಂಗಾಳವನ್ನು ವಿಭಜಿಸಿದನಂತರ, ಅವುಗಳಿಗೆ ಭಾಷಾವಾರು ಹೆಸರುಗಳನ್ನು ಕೊಡದೆ ಭೌಗೋಳಿಕ ಹೆಸರುಗಳನ್ನು ಕೊಡಲಾಗುವುದೆಂದು ಹೇಳಲಾಗಿದೆ.

○

ರಾಜರ ನಿರ್ಧಾರ

ಬೊಂಬಾಯಿ— ರಾಜರ ಒಕ್ಕೂಟದ ಸರ್ವಸದಸ್ಯರ ಸಭೆಯು ರಾಜಧನ ಮತ್ತು ರಾಜರಿಗಿರುವ ರಿಯಾಯಿತಿಗಳನ್ನು ರಕ್ಷಿಸಿಕೊಳ್ಳಲು ನ್ಯಾಯಾಂಗ ಕಾರ್ಯವೂ ಸೇರಿ, ಅವಶ್ಯಕವಾದ ಎಲ್ಲವನ್ನೂ ಕೈಗೊಳ್ಳಲು ಅಧಿಕಾರ ವರ್ಗಕ್ಕೆ ಆಜ್ಞೆ ಮಾಡಿದೆ.

ಕೇಂದ್ರವು ಏನು ಮಾಡುವುದೋ ?

ಬೆಂಗಳೂರು— ಕೇಂದ್ರವು ಮಹಾರ್ಜಕಮಿಷನ್ನಿನ ನಿರ್ಣಯವನ್ನು ಲೆಕ್ಕಿಸದೆ, ಚಂಡೀಘರ ವಿಷಯದಲ್ಲಿ ಕೊಟ್ಟ ತೀರ್ಪಿನಂತೆ, ಮೈಸೂರು–ಮಹಾರಾಷ್ಟ್ರ ಗಡಿ ವ್ಯಾಜ್ಯದಲ್ಲಿ ನಿರ್ಣಯಿಸಬಹುದೆಂದು ರಾಜ್ಯದ ಗಡಿ ಸಲಹಾ ಸಮಿತಿ ,ಅಧ್ಯಕ್ಷ ಶ್ರೀ ಮುಲ್ಲೇಮುಕ್ಕರವರು ಅಭಿಪ್ರಾಯ ವ್ಯಕ್ತ ಪಡಿಸಿರುವರು.

○

ಜೀವನಾಂಶಕ್ಕೆ ರ ಗಂಡನ ಅರ್ಜಿ

ವಿಂಡ್ಸರ್— ತನ್ನನ್ನು ಬಿಟ್ಟ ಹೆಂಡತಿಯ ವಿವಾಹವಿಚ್ಛೇದನ ಮೊಖದ್ದಮೆಯಲ್ಲಿ 63 ವರ್ಷದ ಲೂಹಿ ಕೊರ್ಹೆ ಆಕೆಯಿಂದ ತನಗೆ ವಾರಕ್ಕೆ 100 ಡಾಲರು ಜೀವನಾಂಶ ಕೊಡಿಸಬೇಕೆಂದು ಕೇಳಿದ್ದಾನೆ – ಗಂತ ಹೆಂಡತಿಯಿಂದ ಜೀವನಾಂಶ ಕೇಳಿರುವುದು ಕನಡಾದಲ್ಲಿ ಇದೇ ಪ್ರಪ್ರಥಮ.

★

ಅಕ್ರಮ ಚಿನ್ನ ಸಾಗಾಣಿಕೆಗೆ ಶಿಕ್ಷೆ

ತುನುಕೂರು— ಪೂನಾದಿಂದ ಕಳೆದ ನವೆಂಬರಿದಲ್ಲಿ ಬಂದ, 500 ತೊಲಾ ಅಕ್ರಮ ಚಿನ್ನ ಹೊಂದಿದ್ದು ವಿಚಾರಣೆಗೊಳಪಡಿಸಲಾಗಿದ್ದ ಮುಹಮ್ಮದ್ ಸಾಹೇಬ್ ಎಂಬಾತನಿಗೆ 6 ತಿಂಗಳು ಕಠಿಣ ಸಜೆ ಮತ್ತು ರೂ 400 ಜುಲ್ಮಾನೆ ವಿಧಿಸಲಾಯಿತು.

★

ಮನನಾರ್ಹ ವಿಷಯ

ಹಿತನಾಗಲೀ ಅಹಿತನಾಗಲೀ ಆಪ್ತಿಯ ಸ್ವಾಧೀನಪಡಿಸಿಕೊಂಡು ಸ್ವೀಕೃತಿಯಿಂದ ಆನುಭವಿಸಿಕೊಂಡು ಬಂದರೆ ಅದು ಬರಿದಾಗುವುದೇನೋ ಖಂಡಿತ.

ಸಾರನಾರ್ಥಿಕಕ್ಕೆ ಅವಕಾಶವಾಗಲಿ

ನವದೆಹಲಿ— ರಾಜಕೀಯ, ರಾಜಕಾರಣಿ ತಂತ್ರ ಮತ್ತು ವಿಶ್ವಸಂಸ್ಥೆ ಮಾನವ ಸಮಸ್ಯೆಯನ್ನು ಪರಿಹರಿಸಲು ವಿಫಲಗೊಂಡಿವೆ ; ಅದರ ಪರಿಹಾರಕ್ಕೆ ಆಧ್ಯಾತ್ಮಿಕಕ್ಕೆ ಅವಕಾಶ ಕೊಡಬೇಕೆಂದು ವಿಶ್ವದಾದ್ಯಂತ ಮತೀಯ ನಾಯಕರು ಇಚ್ಛಿಸಿದ್ದಾರೆಂದು ಮೂರು ದಿನಗಳು ನಡೆದ ವಿಶ್ವ ಧರ್ಮಗಳ ಸಮ್ಮೇಳನದ ಪರಿಸಮಾಪ್ತಿ ಭಾಷಣದಲ್ಲಿ ಸಹ ಅಧ್ಯಕ್ಷ ಬೇರ್ಡ್ ಫ್ಲೈರಿಯವರು ಹೇಳಿದರು.

★

ಪ್ರತ್ಯೇಕ ಜಿಲ್ಲೆ

ನವದೆಹಲಿ— ಪಶ್ಚಿಮ ಬಂಗಾಳಾದಲ್ಲಿ ಪ್ರತ್ಯೇಕ ಭಾನಲ್ಪುರ ಪ್ರಾಂತ್ಯ ನಿರ್ಮಿಸಬೇಕೆಂಬ ಚಳವಳ ತೀವ್ರಗೊಂಡಿದೆ.

○

ಕಳ್ಳ ವಿಮಾನ ಓಡಾಟ ಸ್ಥಳ

ಥಾಣಾ— ಕೊಲಾಬಾ ಜಿಲ್ಲೆಯು ಖಾರ್ಪಾಡ ಜಿಲ್ಲೆಯ ಹತ್ತಿರ ಅನಧಿಕೃತ ವಿಮಾನ ಓಡಾಟ ಸ್ಥಳ ಮಾಡಿಕೊಂಡಿರುವರೆಂದು ಹೇಳಲಾದ ಅಂತರರಾಷ್ಟ್ರೀಯ ಸಾಗಾಣಿಕೆಗಾರರ ತಂಡವನ್ನು ಹುಡುಕಲಾಗುತ್ತಿದೆ.

○

ಅಂತರ ರಾಷ್ಟ್ರೀಯ ಮೋಟಾರು ರೇಸ್

ಇಸ್ಕೇಲಿನಲ್ಲಿನ ಪ್ರಪ್ರಥಮ ಗ್ರಾಂಡ್ ಪ್ರೈಜ್ ಅಂತರರಾಷ್ಟ್ರೀಯ ಮೋಟಾರು ರೇಸ್ ನವೆಂಬರಿನಲ್ಲಿ ಆಷ್ಟೆಲ್ಲಾನಲ್ಲಿ ನಡೆಯುವುದು – 6 ಕಿಲೋಮಿಟರಿನ ಈ ರೇಸಿನಲ್ಲಿ 50 ನುಂದಿ ವಿಶ್ವವಿಖ್ಯಾತ ಮೋಟಾರು ರೇಸ್ ಡ್ರೈವರುಗಳು ಭಾಗವಹಿಸಲಿರುವರು.

★

ತಾ.13 –2–70 ನೇ ಶುಕ್ರವಾರದಿಂದ 2 ವಾರ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರದಲ್ಲಿ

ಪ್ರತಿ ದಿನ 2–30, 6 ಮತ್ತು 9–30 ಕ್ಕೆ — 2–45, 6–15 ಮತ್ತು 9–45ಕ್ಕೆ

.... ದೇವೇಂದ್ರ ಗೋಯಲ್ಸ್‌ರವರ ವರ್ಣದ ಅತ್ಯುತ್ತಮ ವರ್ಣರಂಜಿತ ಚಿತ್ರ ....

‘ಏಕ್ ಫೂಲ್ ದೋ ಮಾಲಿ’

ಪಾತ್ರ — ಸಂಜಯ್, ಸಾಧನ, ಬಾಲರಾಜ್ ಸಹಾನಿ

ದಿಗ್ದರ್ಶನ : ದೇವೇಂದ್ರ ಗೋಯಲ್ ಸಂಗೀತ : ರವಿ

ಗೋ ಹತ್ಯೆ

ಭಾರತ ಗೋಸೇವಾ ಸಂಘದ ಅಧ್ಯಕ್ಷ ಶ್ರೀ ಯು ಎಸ್ ಡೇಬಾರ್ ಮತ್ತು ಪಾರ್ಲಿಮೆಂಟು ಸದಸ್ಯ ಶ್ರೀ ಕನುಲನಯನ ಬಜಾಜ್‌ರವರು, ಕಲ್ಕತ್ತಾಕ್ಕೆ ಹೋಗಿದ್ದು ಅಲ್ಲಿನ ಬಂಗಾಳಾ ಮುಖ್ಯಮಂತ್ರಿ ಶ್ರೀ ಅಜಾಯ್ ಮುಖರ್ಜಿಯವರನ್ನು ಕಂಡು, ಅಲ್ಲಿನ ಬಂಗಾಳಾದಲ್ಲಿ 14 ವರ್ಷಕ್ಕಿಂತ ಕಡಮೆ ವಯಸ್ಸಿನ ಪಶುನಿಳನ್ನು ಹತ್ಯೆ ಮಾಡಬಾರದೆಂಬ ಶಾಸನವಿದ್ದರೂ, ಪಶುವೈದ್ಯರು ಕೊಡುವ ದೌರ್ಬಲ್ಯ ಸರ್ಟಿಫಿಕೇಟಿನ ಆಧಾರದ ಮೇಲೆ, ಆ ವಯಸ್ಸಿಗಿಂತ ಕಡಮೆ ವಯಸ್ಸಿನ ಪಶುಗಳ ವಧೆಯಾಗುತ್ತಿರುವುದೆಂದೂ, ಅದಕ್ಕಾಗಿ ಯಾವುದಾದರೂ ಅಧಿಕೃತ ಸ್ವಯಂ ಸಂಸ್ಥೆಯಿಂದ ದೌರ್ಬಲ್ಯ ಸರ್ಟಿಫಿಕೇಟು ಇಲ್ಲದೆ ಯಾವ ಪ್ರಾಣಿಯ ವಧೆಯೂ ಆಗದಂತೆ ನೋಡಿಕೊಳ್ಳಬೇಕೆಂದೂ ಒತ್ತಾಯ ಮಾಡಲಿರುವೆವೆಂದೂ ಗೊತ್ತಾಗಿದೆ.

●✱●

ಜೀವವಿಮಾ

ನವದೆಹಲಿ— ಜೀವವಿಮಾ ಕಾರ್ಪೊರೇಷನ್ ಈ ವರ್ಷ ಜನವರಿ ಮಾಹೆಯಲ್ಲಿ 81, 094 ವಿಮಾದಾರರಿಗೆ ಸಂಬಂಧಿಸಿದಂತೆ 56 19 ಕೋಟಿ ರೂಪಾಯಿ ಬೆಲೆಯ ಹೊಸ ವ್ಯವಹಾರ ನಡೆಸಿತು.

ಜಂಖಾನಾ ರೇಸಿಸ್

ಮೈಸೂರು— 1969 ಸೆಪ್ಟೆಂಬರ್‌ಕ್ಟೋಬರ್ ತಾ || 26 ರಿಂದ 19 ದಿನಗಳ ಕಾರ್ಯಕ್ರಮ ಹೊಂದಿದ್ದ ಜಂಖಾನಾ ಕುದುರೆ ಜೂಜು ಕಳೆದ ಭಾನುವಾರ ಮುಕ್ತಾಯಗೊಂಡಿತು – ಶ್ರೀ ಎಸ್ ಷಾಫಿ ಛಾಂಪಿಯನ್ ಜಾಕಿ ಕಪ್ ಪಡೆದರು.

Help The Gorakshana



Protect the Cow

ಗೋರಕ್ಷಣೆ ಮಹಾ ಪ್ರಾಣಿದಯಾ ಕಾರ್ಯಗಳ ಪಟ್ಟಿಯಲ್ಲಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Quality Printing — Neat Binding
Lakshminarasimha Press
Sivarampet, Mysore

ಪುಟ್ಟಲಿಂಡ್ಸ್ ಅನೋಘ 7 ನೇ ವಾರ
ಶಿನ ಅನೋಘ ಪ್ರಾರಂಭ
.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....
ಒರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅನೋಘ ಕನ್ನಡ ಚಿತ್ರ
ಗೆಜ್ಜೆ ಪೂಜೆ
ಜ
ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
[ದಿನ 3 ಪ್ರದರ್ಶನಗಳು]

ಅಪೆರಾ— 6–2–70 ರಿಂದ
.... ಅತ್ಯನೋಘ ಹಿಂದಿ ಚಿತ್ರ ....
ಪ್ಯಾರ್ ಹಿ ಪ್ಯಾರ್
ಶಿ ಲ
ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ
ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 10–00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI SUDHA
A Superb Tonic

Edited Printed Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4